C-15289 | 4-4-10

# ಕರ್ನಾಟಕ ಸರ್ಕಾರ

ಸಂಖ್ಯೆ: ಸಂವ್ಯಶಾಇ 21 ಶಾಸನ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು,ದಿನಾಂಕ: 27.07.2010.

29/7/x
20.
31/7/x

## ಅಧಿಸೂಚನೆ

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ(ತಿದ್ದುಪಡಿ) ವಿಧೇಯಕ, 2010ಕ್ಕೆ 2010ರ ಜುಲೈ ತಿಂಗಳ ಇಪ್ಪತ್ತ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2010ರ ಕರ್ನಾಟಕ ಅಧಿನಿಯಮ ಸಂಖ್ಯೆ:33 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

XX XX XX

(XX ಲಗತ್ತಿಸಲಾದ ವಿಷಯವನ್ನು ಇಲ್ಲಿ ಸೇರಿಸತಕ್ಕದ್ದು)

1. ಕರ್ನಾಟಕ ರಾಜ್ಯಪತ್ರದ ಸಂಕಲನಕಾರರು, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ IV-A ದಲ್ಲಿ ದಿನಾಂಕ: 27.07.2010ರಂದು ಪ್ರಕಟಿಸಬೇಕೆಂದು ಕೋರಿದೆ. ಇದರ ಮುದ್ರಿತ ಬಿಡಿ ಪ್ರತಿಗಳನ್ನು ವಾಡಿಕೆಯ ಕ್ರಮದಂತೆ 100 ಪ್ರತಿಗಳನ್ನು ಪ್ರಾರೂಪಣಾ ಶಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೂ, 200 ಪ್ರತಿಗಳನ್ನು ನೇರವಾಗಿ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೂ** ಮತ್ತು ತಲಾ 50 ಪ್ರತಿಗಳನ್ನು ಈ ಇಲಾಖೆಯ ಪ್ರಕಟಣೆ ಮತ್ತು ಕ್ರೋಢೀಕರಣ ಶಾಖೆಗೂ ಕಳುಹಿಸಿ ಕೊಡತಕ್ಕದ್ದು.

2. ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.

ಪ್ರತಿಗಳು:

1. ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು (ಪ್ರಸ್ತಾವಿತ ತಿದ್ದುಪಡಿ ಅಧಿನಿಯಮದ 200 ಪ್ರತಿಗಳನ್ನು ನೇರವಾಗಿ ಮುದ್ರಣಾಲಯದಿಂದ ಪಡೆದುಕೊಳ್ಳುವಂತೆ ಕೋರಲಾಗಿದೆ)
2. ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (ಮೇಲ್ಪತ್ರದೊಂದಿಗೆ)
3. ಸಚಿವ ಸಂಪುಟ ಶಾಖೆ. (ಸಿ 331/2010)
4. ಪ್ರಕಟಣಾ ಶಾಖೆ : ಕ್ರೋಢೀಕರಣ ಶಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.
5. ಬಿಡಿ ಪ್ರತಿಗಳು.

2010ರ ಕರ್ನಾಟಕ ಅಧಿನಿಯಮ ಸಂಖ್ಯೆ 33

(2010ರ ಜುಲೈ ಇಪ್ಪತ್ತ ಏಳನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2010

(2010ರ ಜುಲೈ ಇಪ್ಪತ್ತ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ***ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2010*** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 2ನೇ ಪ್ರಕರಣದ (ಎಲ್) ಖಂಡದಲ್ಲಿ, "ಯೋಗ," ಎಂಬ ಪದ ಮತ್ತು ಅಲ್ಪವಿರಾಮ ಚಿಹ್ನೆಯ ತರುವಾಯ "ಸಂಯೋಜಿತ ವೈದ್ಯಪದ್ಧತಿ," ಎಂಬ ಪದಗಳನ್ನು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಸೇರಿಸತಕ್ಕದ್ದು.

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದ ಪರಂತುಕದಲ್ಲಿ, "ಗೊತ್ತುಪಡಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ" ಎಂಬ ಪದಗಳಿಗೆ "ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2010ರ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳುಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 4ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(i) (ಬಿ) ಖಂಡದಲ್ಲಿ, "ಸದಸ್ಯರು" ಎಂಬ ಪದಕ್ಕೆ "ಸದಸ್ಯ ಕಾರ್ಯದರ್ಶಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಸಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | |
|---|---|
| "(ಡಿ) ಜಿಲ್ಲಾ ಆಯುಷ್ ಅಧಿಕಾರಿ | ಸದಸ್ಯರು |
| (ಇ) ಸಂಬಂಧಿಸಿದ ಜಿಲ್ಲೆಯ ಭಾರತದ ಆಯುಷ್ ಸಂಯುಕ್ತ ಸಂಘದ ಅಧ್ಯಕ್ಷರು/ ಕಾರ್ಯದರ್ಶಿ | ಸದಸ್ಯರು" |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಜಿ.ಕೆ.ಬೋರೇಗೌಡ)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.